ಅನುಭವಿಸುತ್ತಿದ್ದಾರೆ! ಶ್ಯಾಮನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಶಿಶಿರನಿಗೆ ಪಟ್ಟಣದ ಬದುಕನ್ನು ಹೀಗೆ ಅನಿವಾರ್ಯವಾಗಿಸಿರುವ ಸರ್ಕಾರದ ಮೇಲೆ, ರಾಜಕಾರಣಿಗಳ ಮೇಲೆ, ಅದನ್ನೇ ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವ ಜನರ ಮೇಲೆ, ಕೊನೆಗೆ ತನ್ನ ಮೇಲೂ ಅಸಾಧ್ಯ ಕೋಪವುಕ್ಕಿತ್ತು.

★★★

"ಎನಫ್ ಈಸ್ ಎನಫ್."

ಶಿಶಿರ ಸ್ವಲ್ಪ ಜೋರಾಗಿಯೇ ಗೊಣಗಿಕೊಂಡ. ಬೆಂಗಳೂರಿಗೆ ಒಳಹೋಗುವ ದಾರಿಗಳು ಮಾತ್ರ ಅಲ್ಲ, ಹೊರಬರುವ ಮಾರ್ಗಗಳೂ ಇವೆ. ಒಳಬರುತ್ತೇವೋ, ಹೊರಹೋಗುತ್ತೇವೋ ಎನ್ನುವುದು ಯಾವ ಬಸ್ಸನ್ನು ಹತ್ತುತ್ತೇವೆನ್ನುವುದರ ಮೇಲೆ ನಿರ್ಧಾರವಾಗುತ್ತದೆ.

ತಾನೀಗ ಬಸ್ಸು ಬದಲಿಸುವ ಸಮಯ ಬಂದಿದೆ.

ಭಯವನ್ನು ಕಟ್ಟಿಡಬೇಕು. ಜನ ಏನನ್ನುತ್ತಾರೋ ಎನ್ನುವ ಭಯ. 'ಪೇಟೆಯವನು' ಎನ್ನುವ ಪೇಟ ಎಲ್ಲಿ ಕಳಚಿ ಬೀಳುತ್ತದೋ ಎನ್ನುವ ಭಯ. ಪರ್ಸಿನೊಳಗೆ ಏನನ್ನು ತುಂಬಿಕೊಳ್ಳಲಿ ಎನ್ನುವ ಭಯ. 'ಪಟ್ಟಣದ ಹುಡುಗನೇ ಬೇಕು' ಎನ್ನುವ ಹುಡುಗಿಯರ ಭಯ!

ಸೂರಿಯ ಅಂಗಡಿ ಚೆನ್ನಾಗಿ ನಡೆಯುತ್ತಿದೆ. ಈ ಮೊದಲೇ ಅವನು ಒಂದೆರೆಡು ಬಾರಿ ಕೇಳಿದ್ದ. ಒಂದು – ಒಂದೂವರೆ ಲಕ್ಷ ಹೂಡಿದರೆ ಐಸ್ಕ್ರೀಂ, ಕೋಲ್ಡ್ ಡ್ರಿಂಕ್ಸ್, ಮತ್ತೊಂದಿಷ್ಟು ಬೇಕರಿ ಐಟಮ್‌ಗಳನ್ನ ಇಡಬಹುದು. ಊರಲ್ಲಿ ಎಲ್ಲೂ ಅವೆಲ್ಲಾ ಇಲ್ಲ ಎನ್ನುತ್ತಿದ್ದ. ಆ ಒಂದೂವರೆ ಲಕ್ಷವನ್ನು ನಾನೇ ಹೊಂದಿಸಿಕೊಡಬೇಕು. ಬಂದ ಲಾಭದಲ್ಲಿ ಅಷ್ಟಷ್ಟೇ ಕೂಡಿಸುತ್ತಾ ನಿಧಾನಕ್ಕೆ ಒಂದೆಕರೆ ನೀರಾವರಿ ಜಮೀನು ಕೊಳ್ಳಬೇಕು. ಅಲ್ಲಿಗೆ ಬೆಂಗಳೂರಿನ ಹಾದಿ ಪೂರ್ಣವಾಗಿ ಮುಚ್ಚುತ್ತದೆ...

"ಯಾರ್ರೀ ಸಿರ್ಗಾರ್ ಕೈಮರ ಇಳ್ಕೋರೂ?"

ಕಂಡಕ್ಟರ್‌ನ ಕೂಗು ಯೋಚನೆಗಳ ಆಳದೊಳಗೆ ಕೊಕ್ಕೆ ಹಾಕಿ ಶಿಶಿರನನ್ನು ಆಚೆ ಎಳೆಯಿತು. ಬಸ್ಸಿಂದ ಇಳಿದು ನೇರ ಸೂರಿಯ ಅಂಗಡಿಯತ್ತ ಹೆಜ್ಜೆ ಹಾಕಿದ. ಹೇಗಿರಬಹುದು ಸುರೇಶ? ಎಷ್ಟಿರಬಹುದು ಅವನ ತಿಂಗಳ ಆದಾಯ? ದಿನಕ್ಕೆ ಮುನ್ನೂರು ರೂಪಾಯಿ ವ್ಯಾಪಾರ ಆದ್ರೂ ಸಾಕು ಮಾರಾಯ ಎನ್ನುತ್ತಿದ್ದ. ಹಳ್ಳಿಯಲ್ಲಿ ನೆಮ್ಮದಿ ಅಷ್ಟು ಅಗ್ಗಕ್ಕೆ ದೊರೆಯುತ್ತದಾ? ಬರೀ ಮುನ್ನೂರು ರೂಪಾಯಿಗೆ? ಇದಕ್ಕೆಲ್ಲ ಉತ್ತರಿಸಬೇಕಾದವನು ಅವನೇ. ಕೇಳಬೇಕು ಅವನನ್ನ, ಓದಿದ್ದೇವೆನ್ನುವ ಒಂದೇ ಒಂದು ಕಾರಣಕ್ಕೆ ಎಲ್ಲರೂ ಬಿಟ್ಟುಹೋಗುವ ಇದೇ ಹಳ್ಳಿಯಲ್ಲಿ ಅದು ಹೇಗೆ ಬದುಕು ಕಂಡುಕೊಂಡೆ ಎಂದು. ನಾನಲ್ಲಿ ಕಂಪ್ಯೂಟರ್ ಮುಂದಿನ ಅಸಹಾಯ ಕುರ್ಚಿಗಳಲ್ಲಿ, ಅರ್ಥವೇ ಇಲ್ಲದ ಫೈಲುಗಳ ಕಡತಗಳಲ್ಲಿ, ಬಾಸ್ ಜೊತೆಗಿನ ಬಿಸಿಬಿಸಿ ಚರ್ಚೆಗಳಲ್ಲಿ, ಇಷ್ಟವೇ ಆಗದ ಡೆಬಿಟ್ ಕ್ರೆಡಿಟ್‌ಗಳನ್ನು ಹೊಂದಿಸುವ ಮಂಡೆಬಿಸಿಯಲ್ಲಿ ಮತ್ತೆ ಮತ್ತೆ ದಣಿಯುತ್ತಾ ಅದನ್ನೇ ಜೀವನವೆಂದು ನಂಬಿರುವಾಗ ಇಲ್ಲಿ ಬಳ್ಳಿ ಹಬ್ಬುವ ಲಯವನ್ನೂ, ಹೂವು ಅರಳುವ ಸೌಂದರ್ಯವನ್ನೂ, ನೆಟ್ಟ ಗಿಡ ಬೆಳೆ ಬೆಳೆಯುವ ಸಂಭ್ರಮವನ್ನೂ ತಮ್ಮ ತಮ್ಮ ಜೀವನೋಪಾಯವಾಗಿಸಿಕೊಂಡು ಬದುಕುವ ಮಹಾಭಾಗ್ಯದ ಕಥೆಯನ್ನಾದರೂ ಕೇಳಿ ಕೃತಾರ್ಥನಾಗಬೇಕು. ಹಾಗೆಂದು ಯೋಚಿಸುವಾಗಲೇ ಶಿಶಿರ ಸುರೇಶನ ಅಂಗಡಿಯ ಅಂಗಳವನ್ನು ಪ್ರವೇಶಿಸಿದ. 'ಸುಸ್ವಾಗತ' ಎಂಬ ಕೊಳೆ ಹಿಡಿದ ದ್ವಾರಬಾಗಿಲಿನ ಮೇಲಿನ ಬರಹವನ್ನು ಓದಿಕೊಂಡು ಒಳಗೆ ಹೋದವನಿಗೆ ಸುರೇಶನ ಅಂಗಲಾಚುವ ದನಿ ಅನಿರೀಕ್ಷಿತವಾಗಿ ಕಿವಿಮೇಲೆ ಬಿತ್ತು.

"ಇನ್ನು ಒಂದೇ ಒಂದು ವಾರ ಟೈಮ್ ಕೊಡಿ ಅಣ್ಣ... ಪೂರ್ತಿ ಒಂದೂವರೆ ಸಾವ್ರ ನಿಮ್ ಅಕೌಂಟ್‌ಗೆ ಹಾಕ್ಬಿಡ್ತೀನಿ... ಈ ಸಲ ಖಂಡಿತ ತಪ್ಪಲ್ಲ... ಖಂಡಿತಾ ಅಣ್ಣ..."

ಮಾತಿನ ನಡುವೆಯೇ ಶಿಶಿರನಿಗೆ ಕುಳಿತುಕೋ ಎಂಬಂತೆ ಸನ್ನೆ ಮಾಡಿದ ಅವನು ಮತ್ತೆರೆಡು